ಕರ್ನಾಟಕ ಸರ್ಕಾರ

**ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ**

ಸಂಖ್ಯೆ: ತಾಂಶಿನಿ 03 ಸಿಡಿಸಿ(1) 2019-20

ಆಯುಕ್ತರ ಕಚೇರಿ
ಅರಮನೆ ರಸ್ತೆ, ಬೆಂಗಳೂರು-560 001.
ದಿನಾಂಕ: 04-07-2022.

# ಸುತ್ತೋಲೆ

ವಿಷಯ: 2022-23ನೇ ಸಾಲಿನಿಂದ 5ನೇ ಸೆಮಿಸ್ಟರ್ ಡಿಪ್ಲೊಮಾ ಪ್ರೋಗ್ರಾಂಗಳಿಗೆ ಅಳವಡಿಸಬೇಕಾಗಿರುವ ಪರಿಷ್ಕೃತ ಪಠ್ಯಕ್ರಮಗಳ (ಕರಡು) ಬಗ್ಗೆ ವಿಷಯ ತಜ್ಞರು / ಹಳೆವಿದ್ಯಾರ್ಥಿಗಳು / ಔದ್ಯೋಗಿಕ ಕ್ಷೇತ್ರಗಳ ಪರಿಣಿತರಿಂದ ಅಭಿಪ್ರಾಯಗಳನ್ನು ಕ್ರೋಡೀಕರಿಸುವ ಕುರಿತು.

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, 2020-21ನೇ ಸಾಲಿನಿಂದ ರಾಜ್ಯದ ಡಿಪ್ಲೊಮಾ ಪ್ರೋಗ್ರಾಂಗಳ ಪಠ್ಯಕ್ರಮಗಳನ್ನು ಪರಿಷ್ಕರಿಸಿದ್ದು, 2022-23ನೇ ಸಾಲಿನಿಂದ 5ನೇ ಸೆಮಿಸ್ಟರ್ ಡಿಪ್ಲೊಮಾ ವ್ಯಾಸಂಗದಲ್ಲಿ ಅಳವಡಿಸಲು ಉದ್ದೇಶಿಸಿರುವ ಕರಡು ಪಠ್ಯಕ್ರಮಗಳನ್ನು ವಿವಿಧ ವಿಷಯ ತಜ್ಞರು ಮತ್ತು ಔದ್ಯೋಗಿಕ ಕ್ಷೇತ್ರಗಳಲ್ಲಿರುವ ವಿಷಯ ಪರಿಣಿತರ ಮುಖೇನ ತಯಾರಿಸಲಾಗಿದೆ.

ಸದರಿ 5ನೇ ಸೆಮಿಸ್ಟರ್ ಡಿಪ್ಲೊಮಾ ವ್ಯಾಸಂಗದ ಕರಡು ಪಠ್ಯಕ್ರಮಗಳನ್ನು ನಿರ್ದೇಶನಾಲಯದ ವೆಬ್‌ಸೈಟ್‌ನಲ್ಲಿ ಪ್ರಕಟಿಸಿದ್ದು, ಕರಡು ಪಠ್ಯಕ್ರಮಗಳ ಬಗ್ಗೆ ಸಕಾರಾತ್ಮಕ ಅಭಿಪ್ರಾಯಗಳನ್ನು ಈ ಕೆಳಕಂಡ ಗೂಗಲ್ ಫೋರ್ಮ್ ಲಿಂಕ್ ಮುಖಾಂತರ ಸಲ್ಲಿಸಲು ಸೂಚಿಸಿದೆ.

https://forms.gle/XW7LKnp3mHbDfphM6

ಸದರಿ ವಿಷಯವಾಗಿ ಪ್ರಾಚಾರ್ಯರು ಸಂಸ್ಥೆಯ ಹಳೆ ವಿದ್ಯಾರ್ಥಿ ಸಂಘ / ಇಂಡಸ್ಟ್ರಿ ಇನ್‌ಸ್ಟಿಟ್ಯೂಟ್ ಇಂಟರಾಕ್ಷನ್ ಸೆಲ್‌ಗಳ ಸಭೆ ಕರೆದು, ಸಂಬಂಧಪಟ್ಟವರಿಂದ ಸಕಾರಾತ್ಮಕ ಅಭಿಪ್ರಾಯಗಳನ್ನು ಮೇಲ್ಕಂಡ ಗೂಗಲ್ ಫೋರ್ಮ್ ಲಿಂಕ್ ಮುಖಾಂತರ ಸಲ್ಲಿಸಲು ಸೂಕ್ತ ಕ್ರಮ ವಹಿಸುವಂತೆ ಸೂಚಿಸಲಾಗಿದೆ.

ಜಂಟಿ ನಿರ್ದೇಶಕರು (ಸಿಡಿಸಿ)

ಗೆ:

1. ರಾಜ್ಯದ ಎಲ್ಲಾ ಸರ್ಕಾರಿ / ಅನುದಾನಿತ / ಖಾಸಗಿ ಪಾಲಿಟೆಕ್ನಿಕ್‌ಗಳ ಪ್ರಾಚಾರ್ಯರುಗಳಿಗೆ: ಸೂಕ್ತ ಕ್ರಮಕ್ಕಾಗಿ ಹಾಗು ಅಭಿಪ್ರಾಯಕ್ಕಾಗಿ.
2. ಮಾನ್ಯ ಆಯುಕ್ತರ ಆಪ್ತ ಶಾಖೆ- ಮಾಹಿತಿಗಾಗಿ.
3. ಆಯುಕ್ತಾಲಯದ ಎಲ್ಲಾ ಅಧಿಕಾರಿಗಳು- ಸೂಕ್ತ ಅಭಿಪ್ರಾಯಕ್ಕಾಗಿ.
4. ಇ-ಗೌವರ್ನೆನ್ಸ್ ವಿಭಾಗ- ತಾಂತ್ರಿಕ ಶಿಕ್ಷಣ ಇಲಾಖೆಯ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು.